



# ಬಣ್ಣದ ಕೊಡೆ ನೃತ್ಯ!

ಬಣ್ಣದ ಕೊಡೆಗಳನ್ನು ಹಿಡಿದುಕೊಂಡು ತುಂಬ ಹೊತ್ತು
ಮಹಿಳೆಯರು ಮಾಡಿದ ಜನಪದ ನೃತ್ಯ ಈಗ ಗಿನ್ನೆಸ್
ಜಾಗತಿಕ ದಾಖಲೆಯನ್ನು ಸಾಧಿಸಿದೆ. ಕಾಮನಬಿಲ್ಲಿನ ಏಳು
ವರ್ಣಗಳ ಕೊಡೆಗಳನ್ನು ಹಿಡಿದು, ಅದೇ ವರ್ಣದ ಉಡುಪು
ಧರಿಸಿ ನೃತ್ಯ ಮಾಡಿದವರು ಒಬ್ಬರೋ ಇಬ್ಬರೋ ಅಲ್ಲ. ಎರಡು
ಸಾವಿರ ಮಹಿಳೆಯರು ಏಕಕಾಲದಲ್ಲಿ ಕುಣಿತದಲ್ಲಿ ತೊಡಗಿ
ಕಂಡವರ ಮನಕ್ಕೆ ಮುದ ನೀಡಿದರು.

ಪಂಜಾಬಿನ ಸುರೇಂದ್ರನಗರದಲ್ಲಿ ವರ್ಷವೂ ಏರ್ಪಡುವ
ತಾರಾ ನೇತ್ರ ಜಾತ್ರೆ ತುಂಬ ಪ್ರಸಿದ್ಧವಾಗಿದೆ. ಅಲ್ಲಿ ಮುಖ್ಯವಾಗಿ
ಜಾನುವಾರು ಪ್ರದರ್ಶನ ಮತ್ತು ಮಾರಾಟ ಸಾವಿರಾರು
ಸಂಖ್ಯೆಯಲ್ಲಿ ನಡೆಯುತ್ತದೆ. ಆ ಸಂದರ್ಭದಲ್ಲಿ 2016ರಲ್ಲಿ
ಮೇರೆ ಮೀರಿ ಜನಸಾಗರವೇ ಅಲ್ಲಿಗೆ ಬಂದದ್ದು ಗ್ರಾಮೀಣ
ಮಹಿಳೆಯರ ಈ ವೈವಿಧ್ಯಮಯ ನೃತ್ಯ ಪ್ರದರ್ಶನಗಳನ್ನು
ನೋಡಲು. ನೃತ್ಯಕ್ಕಾಗಿ ಮರದಿಂದ ವಿಶೇಷವಾದ ಬಣ್ಣದ
ಕೊಡೆಗಳನ್ನು ತಯಾರಿಸಲಾಗಿತ್ತು. ಸ್ವತಃ ಪಂಜಾಬದ
ಮುಖ್ಯಮಂತ್ರಿ ಈ ಅಪರೂಪದ ಕಾರ್ಯಕ್ರಮವನ್ನು
ಸನಿಹದಿಂದ ವೀಕ್ಷಿಸಿದರು.

■ ಪ. ರಾಮಕೃಷ್ಣ ಶಾಸ್ತ್ರಿ

